

# ಬದಲಾಯಿತು ಕೃಷಿರಂಗ ನಾವೆಲ್ಲ ವಿಷಕಂಠರು ಈಗ

■ ನರೇಂದ್ರ ರೈ ದೇರ್ಲ

ಒಂದಲ್ಲಾ ಒಂದು ಸಂದರ್ಭದಲ್ಲಿ ಪ್ರತಿಯೊಬ್ಬರೂ ಸೊಳ್ಳೆ, ಜಿರಲೆ, ನೊಣ, ಇಲಿಗಳಿಗೆ ವಿಷವುಣ್ಣಿಸಿದವರೇ. ಆದರೆ, ಸ್ವಯಂ ನಾವೇ ವಿಷ ಸೇವಿಸುತ್ತಿರುವ ಅರಿವು ಎಷ್ಟು ಮಂದಿಗಿದೆ? ಆಹಾರದ ಹೆಸರಿನಲ್ಲಿ ಸೇವಿಸುವ ಹಾಲು, ಅನ್ನ, ನೀರು, ತರಕಾರಿ, ಪ್ರತಿಯೊಂದರಲ್ಲೂ ವಿಷದ ಅಂಶವಿದೆ. ನಗರಗಳು ಬೆಳೆದಂತೆ, ಆಧುನಿಕತೆಯ ರಂಗುಗಳು ಪ್ರಖರವಾದಂತೆ ಆಹಾರದಲ್ಲಿನ ವಿಷದ ಅಂಶವೂ ಹೆಚ್ಚುತ್ತಿದೆ. ‘ಅನ್ನದಾತ’ ಎನ್ನಿಸಿಕೊಂಡ ರೈತ ಅಪ್ರಜ್ಞಾಪೂರ್ವಕವಾಗಿಯೋ ಮಾರುಕಟ್ಟೆಯ ಒತ್ತಡದಿಂದಲೋ ಹೊಲಗದ್ದೆಗಳಿಗೆ ವಿಷ ಸುರಿಯುತ್ತಿದ್ದಾನೆ. ವ್ಯಾಪಾರಿಗಳಂತೂ ಆಹಾರ–ಹಣ್ಣುಗಳಿಗೆ ಅಲಂಕಾರದ ರೂಪದಲ್ಲಿ ವಿಷಪದಾರ್ಥಗಳನ್ನು ಲೇಪಿಸುತ್ತಿದ್ದಾರೆ. ಇಂಥ ಆಹಾರವನ್ನು ಸೇವಿಸುತ್ತಿರುವ ನಾವೆಲ್ಲ ಒಂದರ್ಥದಲ್ಲಿ ‘ವಿಷಕಂಠ’ರೇ!